ಇ.ಸಿ.ಎ. ನಂ.01/2022
ಆರ್. ಡಬ್ಲ್ಯೂ-1

<u>ದಿನಾಂಕಃ **14-01-2026**</u>

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ 2 ನೇ ಎದುರುದಾರ ಪರ ವಕೀಲರಾದ ಶ್ರೀ.ವಿ.ವಿ.ಕೆ. ರವರಿಂದಃ**

ಈ ಅರ್ಜಿಯಲ್ಲಿ ನಾನು 2 ನೇ ಎದುರುದಾರಳಾಗಿದ್ದು, ಇಂದು ನನ್ನ ಮೌಖಿಕ ಸಾಕ್ಷ್ಯದ ಬದಲು ಈ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿರುತೇನೆ. ಅದರಲ್ಲಿ ಬರದ ಎಲ್ಲಾ ವಿಷಯಗಳು ಸರಿ ಮತ್ತು ನಿಜವಿರುತ್ತವೆ. ಅವುಗಳನ್ನು ತಿಳಿದುಕೊಂಡು ನಾನು ಸಹಿ ಹಾಕಿರುತೇನೆ.

ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿರುತೇನೆ.

1.ದಿನಾಂಕ 23.03.2024 ರಲ್ಲಿ 1 ನೇ ಎದುರುದಾರನಿಗೆ ನೀಡಿದ ನೋಟಿಸಿನ ಕಚೇರಿ ಪ್ರತಿಯನ್ನು ಹಾಜರುಪಡಿಸಿರುತ್ತಾರೆ ಅದನ್ನು ನಿಆರ್-1 ಎಂದು ಗುರುತಿಸಲಾಯಿತು.

2. ದಿನಾಂಕ 23.03.2024 ರಅಂಚೆ ರಸೀದಿಯನ್ನು ಹಾಜರುಪಡಿಸಿರುತ್ತಾರೆ ಅದನ್ನು ನಿಆರ್-2 ಎಂದು ಗುರುತಿಸಲಾಯಿತು.

3.ಅಂಚೆ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಿದಾಗ ಅದರಲ್ಲಿ ದಿನಾಂಕ 23.03.2024 ರಂದು 1 ನೇ ಎದುರುದಾರನಿಗೆ ನೀಡಿದ ನೋಟಿಸು ಇರುತ್ತದೆ ಆದ್ದರಿಂದ ಅದನ್ನು ನಿಆರ್-3 ಎಂದು ಗುರುತಿಸಲಾಯಿತು.ಅಂಚೆ ಲಕೋಟೆಯನ್ನು ನಿ-3 ಎಂದು ಗುರುತಿಸಲಾಯಿತು.

4. ಅಧಿಕಾರ ಪತ್ರವನ್ನು ಹಾಜರುಪಡಿಸಿರುತ್ತಾರೆ ಅದನ್ನು ನಿಆರ್-4 ಎಂದು ಗುರುತಿಸಲಾಯಿತು.

5. ವಾಹನ ವಿಮೆ ಹಾಜರುಪಡಿಸಿರುತ್ತಾರೆ ಅದನ್ನು ನಿಆರ್-5 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯನ್ನು ವಜಾ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತೇನೆ.

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಾದ ಶ್ರೀ.ಎನ್.ಜಿ.ಆರ್. ರವರಿಂದಃ**

ಈ ಪ್ರಕರಣದಲ್ಲಿ ನಾನು ತನಿಖೆಯನ್ನು ಮಾಡಿರುವುದಿಲ್ಲ ಕೇವಲ ದಾಖಲಾತಿಗಳನ್ನು ಪಡೆದುಕೊಂಡಿರುತೇನೆ. ಈ ಪ್ರಕರಣ ಬಗ್ಗೆ ನನಗೆ ವಯಕ್ತಿಕ ಮಾಹಿತಿ ಇರುವುದಿಲ್ಲ. ದಾಖಲಾತಿಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. 1 ನೇ ಎದುರುದಾರನ ವಾಹನವು ನಮ್ಮ ವಿಮಾ ಕಂಪನಿಗೆ ಅದು ನಿಭಂಧನೆಗಳಿಂದ ಒಳಪಟ್ಟಿತ್ತು ಎಂದು ಹೇಳುತ್ತಾರೆ. 1 ನೇ ಎದುರುದಾರನ ವಾಹನವು ವಾಹನ ವಿಮೆಯ ಷರತ್ತುಗಳನ್ನು ಉಲ್ಲಂಘನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ನಮ್ಮ ಕಂಪನಿ ಕಡೆಯಿಂದ 1 ನೇ ಎದುರುದಾರನಿಗೆ ಲಿಖಿತ ರೂಪದಲ್ಲಿ ನೋಟಿಸನ್ನು ನೀಡಿರುತೇವೆ ಆದರೆ ಅದನ್ನು ನಾವು ಹಾಜರುಪಡಿಸಿರುವುದಿಲ್ಲ ಕೇವಲ ವಕೀಲರ ಮೂಲಕ ನೀಡಿದ ಆರ್-1 ಅನ್ನು ಹಾಜರುಪಡಿಸಿರುತ್ತೇವೆ. ನಮ್ಮ ಕಂಪನಿಯ ವಕೀಲರಿಗೆ 1 ನೇ ಎದುರುದಾರನಿಗೆ ಲಿಖಿತ ರೂಪದಲ್ಲಿ ನೋಟಿಸನ್ನು ನೀಡಿಬೇಕೆಂದು ನಾವು ಅವರಿಗೆ ಪರವಾನಿಗೆಯನ್ನು ನೀಡಿದ್ದೆವು. ಸದರಿ ಪರವಾನಿಗೆಯನ್ನು ನೀವು ಹಾಜರುಪಡಿಸಿರುವಿರಾ ಎಂದರೆ ಸಾಕ್ಷಿಯು ನಮ್ಮ ಕಂಪನಿ ಹಾಗೂ ಅದರ ವಕೀಲರ ನಡುವೆ ಮೌಖಿಕ ಹಾಗೂ ಲಿಖಿತ ರೂಪದಲ್ಲಿ ನೋಟಿಸನ್ನು ನೀಡುವ ಬಗ್ಗೆ ಮಾತುಕತೆ ಆಗಿತ್ತು ಎಂದು ಹೇಳುತ್ತಾರೆ.

ನಿಆರ್ -1 ರಿಂದ 3 ಅನ್ನು ನಾವು ಸೃಷ್ಟಿಪಡಿಸಿರುತೇವೆ ಎಂದರೆ ಸರಿಯಲ್ಲ. ನಿಆರ್ -5 ಪ್ಯಾಕೇಜ್ ಪಾಲಿಸಿ ಇರುತ್ತದೆ ಎಂದರೆ ಸರಿ. ಮೃತ ಚಾಲಕನಿಗೆ ನಿಆರ್ -5 ರ ಪ್ರಕಾರ ಪರಿಹಾರ ನೀಡುವಲ್ಲಿ ಒಳಗೊಂಡಿರುತ್ತಾನೆಂದರೆ ಸರಿ. ನಿಪಿ-5 ನೇದ್ದನ್ನು ಯಾದಗಿರಿ ಪ್ರಾದೇಶಿಕ ಸಾರಿಗೆ ಕಚೇರಿಯ ಅಧಿಕಾರಿಗಳು ನೀಡಿರುತ್ತಾರೆ ಎಂದರೆ ಸರಿ. ಅಪಘಾತಕ್ಕಿಡಾದ ವಾಹನದ ಚಾಲಕನು ಕಾನೂನು ಬದ್ದವಾದ ಚಾಲನಾ ಪರವಾನಿಗೆ ಪತ್ರವನ್ನು ಹೊಂದಿದ್ದರು ಸಹಾ ಹೊಂದಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳಿರುತೇನೆಂದರೆ ಸರಿಯಲ್ಲ. 1 ನೇ ಎದುರುದಾರನು ವಾಹನ ವಿಮೆಯನ್ನು ಉಲ್ಲಂಘನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಅಪಘಾತ ಪರಿಹಾರವನ್ನು ನೀಡಬಾರದು ಎನ್ನುವ ಉದ್ದೇಶದಿಂದ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳಿರುತೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

ಓ. ಹೇ. ಕೇ. ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,

ಯಾದಗಿರಿ